ಕಟ್ಟಡಗಳನ್ನು ಪಡೆದು ಅವುಗಳಲ್ಲಿ ಅವಶ್ಯ ಯಂತ್ರೋಪಕರಣಗಳನ್ನು ಅಳವಡಿಸಿ ಪ್ರಾರಂಭಿಕ ಬಂಡವಾಳ ನೋಂದಾಣಿ ಮಾಡುವುದನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು, ಹೆಚ್ಚಿನ ಆರ್ಥಿಕ ಹೊರೆಯಾಗದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನ್ವಯ ಟೆಂಡರನ್ನೂ ಪ್ರಮುಖ ಪತ್ರಿಕೆಗಳ ಮೂಲಕ ಕರೆದಿದ್ದು, ಮೆ:ಕ್ರಿಸ್ಟಿ ಫ್ರೈಡ್‌ಗ್ರಾಂ ಇಂಡಸ್ಟ್ರಿ ಸಂಸ್ಥೆಯು ಆಯ್ಕೆ ಆಗಿದ್ದು, ಆಹಾರ ಸರಬರಾಜನ್ನು ದಿನಾಂಕ:31.07.2009 ರವರೆಗೆ ಮಾಡಲಿದ್ದು, ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ದಿನಾಂಕ:01.08.2009 ರ ನಂತರ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳ ಸದಸ್ಯರು ಟೆಂಡರ್ ನಿಬಂಧನೆಗಳನ್ವಯ ಸ್ವತಂತ್ರವಾಗಿ ಆಹಾರವನ್ನು ತಯಾರಿಸಿ ಸರಬರಾಜು ಮಾಡಲಿದ್ದಾರೆ.

**41 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)**
**ಉಮೇಶ್ ಎ ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)**

ಅ) ರಾಜ್ಯದಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ಜಿಲ್ಲೆಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳಯಲಾಗುತ್ತಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗಿರುವ ಜಿಲ್ಲೆಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

29 ಜಿಲ್ಲೆಗಳು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ರೈತರು ತೋಟಗಾರಿಕಾ ಬೆಳೆಗಳನ್ನು ಬೆಳೆಯುವಂತೆ ಪ್ರೋತ್ಸಾಹಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

(1) ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಸಹಾಯಧನ ನೀಡಲಾಗುತ್ತಿದೆ.

(2) ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಲಭ್ಯ ನೀರಿನ ಸದ್ಬಳಕೆ ಮಾಡಲು ಹನಿನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆ ಅಳವಡಿಸಲು ಸಹಾಯಧನ ನೀಡಲಾಗುತ್ತಿದೆ.

(3) ತೋಟದ ಬೆಳೆಗಳ ಸಸ್ಯ ಸಂರಕ್ಷಣೆಗೆ ಸಹಾಯಧನ ನೀಡಲಾಗುತ್ತಿದೆ.

(4) ಉತ್ತಮ ಗುಣಮಟ್ಟದ ಸಸಿ/ಕಸಿ/ಬೀಜಗಳನ್ನು ಉತ್ಪಾದಿಸಿ ಯೋಗ್ಯ ದರದಲ್ಲಿ ವಿತರಿಸಲಾಗುತ್ತಿದೆ.

(5) ಸಾವಯಕ ಕೃಷಿಯನ್ನು ಪ್ರೋತ್ಸಾಹಿಸಲು ಸಹಾಯಧನ ನೀಡಿ ಉತ್ತೇಜನ ನೀಡಲಾಗುತ್ತಿದೆ.

(6) ಹೊಸ ತರಕಾರಿ ತಳಿಗಳನ್ನು ಬೆಳೆಸಲು ಸಹಾಯಧನ ನೀಡಲಾಗುತ್ತಿದೆ.

(7) ತೋಟಗಾರಿಕೆಯಲ್ಲಿ ಯಾಂತ್ರೀಕರಣ ಕೈಗೊಂಡು ಉತ್ತಮ ಇಳುವರಿ ಪಡೆಯಲು ಮತ್ತು ಕೂಲಿ ವೆಚ್ಚ ತಗ್ಗಿಸಲು ಯಂತ್ರೋಪಕರಣಗಳಿಗೆ ಸಹಾಯಧನ ನೀಡಲಾಗುತ್ತಿದೆ.

(8) ಉತ್ತಮ ತಂತ್ರಜ್ಞಾನದ ತಿಳುವಳಿಕೆ ಪಡೆಯಲು ತರಬೇತಿ, ಪ್ರಾತ್ಯಕ್ಷತೆ, ಪ್ರಚಾರ, ಪುಸ್ತಕಗಳು, ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(9) ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ತೋಟಗಾರಿಕೆ ಫೆಡರೇಷನ್, ಬೆಂಗಳೂರು, ಹಾಪ್‌ಕಾಮ್ಸ್, ಜಿಲ್ಲಾ ಸಹಕಾರ ಸಂಘಗಳಿಗೆ, ಕೆಪೆಕ್‌ಗೆ ಮೂಲ ಸೌಕರ್ಯಾಭಿವೃದ್ದಿಗೆ ನೆರವು ನೀಡಲಾಗುತ್ತಿದೆ.

(10) ತೋಟಗಾರಿಕೆಯಲ್ಲಿ ಸಂಸ್ಕರಣೆಯನ್ನು ಕೈಗೊಂಡು ರೈತರಿಗೆ ನೆರವಾಗಲು ಖಾಸಗಿಯವರಿಗೆ ಸಂಸ್ಕರಣ ಘಟಕ ಸ್ಥಾಪನೆಗೆ, ಶೀತಲಗೃಹಕ್ಕೆ ವಿದ್ಯುತ್, ಶೀತಲವಾಹನ ಖರೀದಿಗೆ, ಮಾರುಕಟ್ಟೆಗಳ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.

<u>ಅನುಬಂಧ</u>

**ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ಜಿಲ್ಲೆ ಮತ್ತು ತಾಲ್ಲುಕುವಾರು ವಿವರಗಳು**

| ಕ್ರ. ಸಂ. | ಜಿಲ್ಲೆ/ತಾಲ್ಲೂಕು | ತೋಟಗಾರಿಕೆ ಬೆಳೆಗಳ ವಿಸೀರ್ಣ (ಹೆಕ್ಟೇರ್‌ಗಳಲ್ಲಿ) | ಕ್ರ. ಸಂ. | ಜಿಲ್ಲೆ/ತಾಲ್ಲೂಕು | ತೋಟಗಾರಿಕೆ ಬೆಳೆಗಳ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|---|---|
| 1 | ಬೆಂಗಳೂರು ನಗರ ಜಿಲ್ಲೆ | | 7 | ರಾಮನಗರ ಜಿಲ್ಲೆ | |
| 1 | ಅನೆಕಲ್ಲು | 3164 | 1 | ಚನ್ನಪಟ್ಟಣ | 18125 |
| 2 | ಬೆಂಗಳೂರು ಉತ್ತರ | 4804 | 2 | ರಾಮನಗರ | 14120.5 |
| 3 | ಬೆಂಗಳೂರು ದಕ್ಷಿಣ | 3232 | 3 | ಕನಕಪುರ | 14987.9 |
| 4 | ಬೆಂಗಳೂರು· | 3337 | 4 | ಮಾಗಡಿ | 11095.7 |

| | ಪೂರ್ವ | | | | |
|---|---|---|---|---|---|
| | ಜಿಲ್ಲೆಯ ಒಟ್ಟು | **14537** | | ಜಿಲ್ಲೆಯ ಒಟ್ಟು | **58329.1** |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | | 8 | ಶಿವಮೊಗ್ಗ ಜಿಲ್ಲೆ | |
| 1 | ದೇವನಹಳ್ಳಿ | 4310 | 1 | ಶಿವಮೊಗ್ಗ | 11450 |
| 2 | ದೊಡ್ಡಬಳ್ಳಾಪುರ | 8969 | 1 | ಶಿಕಾರಿಪುರ | 4469 |
| 3 | ನೆಲಮಂಗಲ | 4631 | 2 | ಸಾಗರ | 7428 |
| 4 | ಹೊಸಕೋಟೆ | 5486 | 3 | ಸೊರಬ | 7554 |
| | ಜಿಲ್ಲೆಯ ಒಟ್ಟು | **23396** | 4 | ತೀರ್ಥಹಳ್ಳಿ | 9181 |
| 3 | ಚಿಕ್ಕಬಳ್ಳಾಪುರ ಜಿಲ್ಲೆ | | 5 | ಭದ್ರಾವತಿ | 15110 |
| 1 | ಬಾಗೇಪಲ್ಲಿ | 2672 | 6 | ಹೊಸನಗರ | 5010 |
| 2 | ಚಿಕ್ಕಬಳ್ಳಾಪುರ | 11728 | | ಜಿಲ್ಲೆಯ ಒಟ್ಟು | **60202** |
| 3 | ಚಿಂತಾಮಣಿ | 14402 | 9 | ತುಮಕೂರು ಜಿಲ್ಲೆ | |
| 4 | ಗೌರಿಬಿದನೂರು | 9121 | 1 | ಚಿಕ್ಕನಾಯಕನಾಹಳ್ಳಿ | 23137 |
| 5 | ಗುಡಿಬಂಡೆ | 1126 | 2 | ಗುಬ್ಬಿ | 40406 |
| 6 | ಶಿಡ್ಲಘಟ್ಟ | 6232 | 3 | ಕೊರಟಗೆರೆ | 5339 |
| | ಜಿಲ್ಲೆಯ ಒಟ್ಟು | **45281** | 4 | ಕುಣಿಗಲ್ಲು | 8889 |
| 4 | ಚಿತ್ರದುರ್ಗ ಜಿಲ್ಲೆ | | 5 | ಮಧುಗಿರಿ | 5778 |
| 1 | ಚಳ್ಳಕೆರೆ | 9152 | 6 | ಪಾವಗಡ | 3619 |
| 2 | ಚಿತ್ರದುರ್ಗ | 11490 | 7 | ಶಿರಾ | 12251 |
| 3 | ಹಿರಿಯೂರು | 14989 | 8 | ತಿಪಟೂರು | 25517 |
| 4 | ಹೊಳಲ್ಕೆರೆ | 32657 | 9 | ತುಮಕೂರು | 22791 |
| 5 | ಹೊಸದುರ್ಗ | 27841 | 10 | ತರುವೇಕೆರೆ | 27562 |
| 6 | ಮೊಳಕಾಲ್ಮೂರು | 2680 | | ಜಿಲ್ಲೆಯ ಒಟ್ಟು | **177289** |
| | ಜಿಲ್ಲೆಯ ಒಟ್ಟು | **98809** | 10 | ಬಾಗಲಕೋಟೆ ಜಿಲ್ಲೆ | |
| 5 | ದಾವಣಗೆರೆ ಜಿಲ್ಲೆ | | 1 | ಬಾದಾಮಿ | 5029.84 |
| 1 | ಚನ್ನಗಿರಿ | 27751 | 2 | ಬಾಗಲಕೋಟೆ | 7265.862 |
| 2 | ದಾವಣಗೆರೆ | 10354 | 3 | ಬಿಳಗಿ | 3130.8 |
| 3 | ಹರಪನಹಳಿ | 9192 | 4 | ಹುನಗುಂದ | 3568.79 |
| 4 | ಹರಿಹರ | 7584 | 5 | ಜಮಖಂಡಿ | 5367.74 |
| 5 | ಹೊನ್ನಾಳಿ | 8634 | 6 | ಮುದೋಳ | 5233.98 |
| 6 | ಜಗಳೂರು | 4485 | | ಜಿಲ್ಲೆಯ ಒಟ್ಟು | **29597.012** |

| | | | | | |
|---|---|---|---|---|---|
| | ಜಿಲ್ಲೆಯ ಒಟ್ಟು | **68000** | | | |
| 6 | ಕೋಲಾರ ಜಿಲ್ಲೆ | | | | |
| 1 | ಬಂಗಾರಪೇಟೆ | 13504 | | | |
| 2 | ಕೋಲಾರ | 14144 | | | |
| 3 | ಮಾಲೂರು | 14981 | | | |
| 4 | ಮುಳಬಾಗಿಲು | 31366 | | | |
| 5 | ಶ್ರೀನಿವಾಸಪುರ | 25893 | | | |
| | ಜಿಲ್ಲೆಯ ಒಟ್ಟು | **99887** | | | |
| 11 | ಬೆಳಗಾವಿ ಜಿಲ್ಲೆ | | 16 | ಉತ್ತರ ಕನ್ನಡ ಜಿಲ್ಲೆ | |
| 1 | ಅಥಣಿ | 1887.33 | 1 | ಅಂಕೋಲ | 1779 |
| 2 | ಬೈಲಹೊಂಗಲ್ | 6914 | 2 | ಭಟ್ಕಳ | 1753 |
| 3 | ಬೆಳಗಾವಿ | 15263 | 3 | ಹಳಿಯಾಳ | 838 |
| 4 | ಚಿಕ್ಕೋಡಿ | 4043.7 | 4 | ಹೊನ್ನಾವರ | 5232 |
| 5 | ಗೋಕಾಕ | 3490.4 | 5 | ಸೂಪ | 659 |
| 6 | ಹುಕ್ಕೇರಿ | 4182 | 6 | ಕಾರವಾರ | 1455 |
| 7 | ಖಾನಾಪೂರ | 15803.36 | 7 | ಕುಮಟಾ | 3949 |
| 8 | ರಾಯಭಾಗ | 3628 | 8 | ಮುಂಡಗೋಡ | 1049 |
| 9 | ರಾಮದುರ್ಗ | 1470 | 9 | ಸಿದ್ದಾಪುರ | 4772 |
| 10 | ಸವದತ್ತಿ | 8148 | 10 | ಸಿರಸಿ | 8091 |
| | ಜಿಲ್ಲೆಯ ಒಟ್ಟು | **64829.79** | 11 | ಯಲ್ಲಾಪುರ | 3410 |
| 12 | ಬಿಜಾಪುರ ಜಿಲ್ಲೆ | | | ಜಿಲ್ಲೆಯ ಒಟ್ಟು | **32987** |
| 1 | ಬಸವನ ಬಾಗೇವಾಡಿ | 10410 | 17 | ಬಳ್ಳಾರಿ ಜಿಲ್ಲೆ | |
| 2 | ಬಿಜಾಪುರ | 10443 | 1 | ಬಳ್ಳಾರಿ | 15167 |
| 3 | ಇಂಡಿ | 6051 | 2 | ಹೂವಿನ ಹಡಗಲಿ | 3753 |
| 4 | ಸಿಂಧಗಿ | 4103 | 3 | ಹರಿಬೊಮ್ಮನಹಳ್ಳಿ | 6062 |
| 5 | ಮುದ್ದೇಬಿಹಾಳ | 1518 | 4 | ಹೊಸಪೇಟೆ | 4601 |
| | ಜಿಲ್ಲೆಯ ಒಟ್ಟು | **32525** | 5 | ಕೂಡ್ಲಗಿ | 2717 |
| 13 | ಧಾರವಾಡ ಜಿಲ್ಲೆ | | 6 | ಸಂಡೂರು | 1518 |
| 1 | ಧಾರವಾಡ | 12580 | 7 | ಸಿರಗುಪ್ಪ | 2632 |
| 2 | ಹುಬ್ಬಳ್ಳಿ | 24094 | | ಜಿಲ್ಲೆಯ ಒಟ್ಟು | **36450** |
| 3 | ಕಲಘಟ್ಟಿ | 1918 | 18 | ಬೀದರ್ ಜಿಲ್ಲೆ | |

| | | | | | |
|---|---|---|---|---|---|
| 4 | ಕುಂದಗೋಳ | 32098 | 1 | ಔರಾದ್ | 846 |
| 5 | ನವಲಗುಂದ | 36229 | 2 | ಬಸವಕಲ್ಯಾಣ | 3079 |
| | ಜಿಲ್ಲೆಯ ಒಟ್ಟು | **106919** | 3 | ಭಾಲ್ಕಿ | 2135 |
| 14 | ಗದಗ ಜಿಲ್ಲೆ | | 4 | ಬೀದರ | 3288.2 |
| 1 | ಗದಗ | 28463 | 5 | ಹುಮನಾಬಾದ್ | 4168 |
| 2 | ಮುಂಡರಗಿ | 4601.1 | | ಜಿಲ್ಲೆಯ ಒಟ್ಟು | **13516.2** |
| 3 | ನರಗುಂದ | 1747 | 19 | ಗುಲ್ಬರ್ಗ ಜಿಲ್ಲೆ | |
| 4 | ರೋಣ | 18964 | 1 | ಅಫ್ಜಲಪುರ | 2587 |
| 5 | ಶಿರಹಟ್ಟಿ | 11226 | 2 | ಆಳಂದ | 3156.7 |
| | ಜಿಲ್ಲೆಯ ಒಟ್ಟು | **65001.1** | 3 | ಚಿಂಚೋಲಿ | 3968.7 |
| 15 | ಹಾವೇರಿ ಜಿಲ್ಲೆ | | 4 | ಚಿತ್ತಾಪುರ | 1019 |
| 1 | ಹಾವೇರಿ | 19119 | 5 | ಗುಲ್ಬರ್ಗ | 2911 |
| 2 | ಹಾನಗಲ್ | 5683 | 6 | ಷಹಪುರ | 4552.92 |
| 3 | ಶಿಗ್ಗಾವಿ | 12307.5 | 7 | ಸುರಪುರ | 1827 |
| 4 | ರಾಣೇಬೆನ್ನೂರು | 12005 | 8 | ಯಾದಗಿರಿ | 1632.5 |
| 5 | ಬ್ಯಾಡಗಿ | 4775 | 9 | ಜೀವರಗಿ | 2127.5 |
| 6 | ಹಿರೇಕೆರೂರು | 7901 | 10 | ಸೇಡಂ | 1626.1 |
| 7 | ಸವಣೂರು | 21653 | | ಜಿಲ್ಲೆಯ ಒಟ್ಟು | **25408.42** |
| | ಜಿಲ್ಲೆಯ ಒಟ್ಟು | **83443.5** | | | |
| 20 | ಕೊಪ್ಪಳ ಜಿಲ್ಲೆ | | 26 | ಕೊಡಗು ಜಿಲ್ಲೆ | |
| 1 | ಗಂಗಾವತಿ | 5799 | 1 | ಮಡಿಕೇರಿ | 16657 |
| 2 | ಕೊಪ್ಪಳ | 5358.6 | 2 | ಸೋಮವಾರಪೇಟೆ | 6787 |
| 3 | ಕುಷ್ಟಗಿ | 4962 | 3 | ವಿರಾಜಪೇಟೆ | 8100 |
| 4 | ಯಲಬುರ್ಗ | 5509 | | ಜಿಲ್ಲೆಯ ಒಟ್ಟು | **31544** |
| | ಜಿಲ್ಲೆಯ ಒಟ್ಟು | **21628.6** | 27 | ಮಂಡ್ಯ ಜಿಲ್ಲೆ | |
| 21 | ರಾಯಚೂರು | | 1 | ಕೃಷ್ಣರಾಜಪೇಟೆ | 16496.6 |
| 1 | ದೇವದುರ್ಗ | 5547 | 2 | ಮದ್ದೂರು | 8317.89 |
| 2 | ಲಿಂಗಸುಗೂರು | 2402 | 3 | ಮಳವಳ್ಳಿ | 12966.72 |
| 3 | ಮಾನವಿ | 2931 | 4 | ಮಂಡ್ಯ | 7713 |
| 4 | ರಾಯಚೂರು | 3727 | 5 | ನಾಗಮಂಗಲ | 16293 |
| 5 | ಸಿಂಧನೂರು | 1923 | 6 | ಪಾಂಡವಪುರ | 4380 |

| | | | | | |
|---|---|---|---|---|---|
| | ಜಿಲ್ಲೆಯ ಒಟ್ಟು | **16530** | 7 | ಶ್ರೀರಂಗಪಟ್ಟ | 6168 |
| 22 | ಚಾಮರಾಜನಗರ ಜಿಲ್ಲೆ | | | ಜಿಲ್ಲೆಯ ಒಟ್ಟು | **72335.21** |
| 1 | ಚಾಮರಾಜನಗರ | 20006 | 28 | ಮೈಸೂರು ಜಿಲ್ಲೆ | |
| 2 | ಗುಂಡ್ಲುಪೇಟೆ | 10570.5 | 1 | ಹೆಗ್ಗಡದೇವನಕೋಟೆ | 6178.55 |
| 3 | ಕೊಳ್ಳೇಗಾಲ | 6387 | 2 | ಹುಣಸೂರು | 9778 |
| 4 | ಯಳಂದೂರು | 1794 | 3 | ಕೃಷ್ಣರಾಜನಗರ | 3009 |
| | ಜಿಲ್ಲೆಯ ಒಟ್ಟು | **38757.5** | 4 | ಮೈಸೂರು | 7740.2 |
| 23 | ಚಿಕ್ಕಮಗಳೂರು ಜಿಲ್ಲೆ | | 5 | ನಂಜನಗೂಡು | 3770.29 |
| 1 | ಚಿಕ್ಕಮಗಳೂರು | 12965 | 6 | ಪಿರಿಯಾಪಟ್ಣ | 4405 |
| 2 | ಕಡೂರು | 51629 | 7 | ಟಿ. ನರಸೀಪುರ | 3843 |
| 3 | ಕೊಪ್ಪಳ | 9189 | | ಜಿಲ್ಲೆಯ ಒಟ್ಟು | **38724.04** |
| 4 | ಮೂಡಿಗೆರೆ | 8744 | 29 | ಉಡುಪಿ ಜಿಲ್ಲೆ | |
| 5 | ನರಸಿಂಹರಾಜಪುರ | 5713 | 1 | ಕಾರ್ಕಳ | 13427 |
| 6 | ಶೃಂಗೇರಿ | 5159 | 2 | ಕುಂದಾಪುರ | 24694 |
| 7 | ತರೀಕೆರೆ | 21829 | 3 | ಉಡುಪಿ | 13637 |
| | ಜಿಲ್ಲೆಯ ಒಟ್ಟು | **115228** | | ಜಿಲ್ಲೆಯ ಒಟ್ಟು | **51758** |
| 24 | ದಕ್ಷಿಣ ಕನ್ನಡ ಜಿಲ್ಲೆ | | | ರಾಜ್ಯದ ಒಟ್ಟು | **1763534** |
| 1 | ಮಂಗಳೂರು | 10282.27 | | | |
| 2 | ಬಂಟವಾಳ | 18503.45 | | | |
| 3 | ಪುತ್ತೂರು | 18211 | | | |
| 4 | ಸುಳ್ಯ | 21401 | | | |
| 5 | ಬೆಳ್ತಂಗಡಿ | 29941.5 | | | |
| | ಜಿಲ್ಲೆಯ ಒಟ್ಟು | **98339.22** | | | |
| 25 | ಹಾಸನ ಜಿಲ್ಲೆ | | | | |
| 1 | ಆಲೂರು | 4265 | | | |
| 2 | ಅರಕಲಗೂಡು | 13576 | | | |
| 3 | ಅರಸೀಕೆರೆ | 33082 | | | |
| 4 | ಬೇಲೂರು | 13886 | | | |
| 5 | ಚನ್ನರಾಯಪಟ್ಟಣ | 26978 | | | |

| | | | | | |
|---|---|---|---|---|---|
| 6 | ಹಾಸನ | 32942 | | | |
| 7 | ಹೊಳೇನರಸೀಪುರ | 6691 | | | |
| 8 | ಸಕಲೇಶಪುರ | 10863 | | | |

**326 ಶ್ರೀ ಯು.ಟಿ.ಖಾದರ್ (ಮಂಗಳೂರು)**
**ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)**

ಅ) ಮಂಗಳೂರು ಕಾರಾಗೃಹದ ನಿರ್ವಹಣೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಆ) ಹಾಗಿದ್ದಲ್ಲಿ, ಕೈದಿಗಳು ತೊಂದರೆ ಅನುಭವಿಸುತ್ತಿರುವುದು ನಿಜವೇ;

ಇಲ್ಲ.

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಉದ್ಭವಿಸುವುದಿಲ್ಲ.

**327 ಶ್ರೀ ಖಾದರ್ ಯು.ಟಿ(ಮಂಗಳೂರು)**
**ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)**

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ತಿಂಗಳ ಗೌರವಧನ ಎಷ್ಟು?

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಮಾಸಿಕ ಗೌರವಧನವನ್ನು ನೀಡಲಾಗುತ್ತಿದ್ದು ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ಆ ಪೈಕಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು?

ಈ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಇ) ಗೌರವಧನವನ್ನು ಹೆಚ್ಚಳ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಸರ್ಕಾರಿ ಆದೇಶ ಸಂಖ್ಯೆ: ಮಮಇ 292 ಐಸಿಡಿ 2008(ಭಾ) ದಿನಾಂಕ: 24–06–2009 ರಲ್ಲಿ ರಾಜ್ಯ ಸರ್ಕಾರದ ನೀಡಲಾಗುತ್ತಿರುವ ಮಾಸಿಕ ಗೌರವಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.250–00 ಹಾಗೂ ಸಹಾಯಕಿಯರಿಗೆ ರೂ.125–00 ಅನ್ನು ದಿನಾಂಕ: 01–04–2009 ರಿಂದ ಅನ್ವಯವಾಗುವಂತೆ ಹೆಚ್ಚಿಸಲಾಗಿರುತ್ತದೆ.